ಕರ್ನಾಟಕ ಸರ್ಕಾರ

ಸಂಖ್ಯೆ:ಜೆಆರ್‌ಓ/ಕ.ಅ/05/2014-15

ಆಯುಕ್ತಾಲಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದ ರಾವ್ ವೃತ್ತ, ಬೆಂಗಳೂರು,
ದಿನಾಂಕ:15/12/2014
22

## ಸುತ್ತೋಲೆ

ವಿಷಯ: ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳ ಪ್ರಕಾರ ಕಡ್ಡಾಯವಾಗಿ ಕಂಪ್ಯೂಟರ್ ಪರೀಕ್ಷೆ ಪಾಸು ಮಾಡದ ಹೊರತು ಪರಿವೀಕ್ಷಣಾವಧಿಯನ್ನು (Probationary Period) ಘೋಷಿಸದಿರುವ ಬಗ್ಗೆ.

ಉಲ್ಲೇಖ: 1. ಸಮಸಂಖ್ಯೆ ಸುತ್ತೋಲೆ ಪತ್ರ ದಿನಾಂಕ:13/10/2014.
2. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/59/ಸೇವನೆ/2012 ಬೆಂ. ದಿನಾಂಕ:06/08/2012.

****

ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳ ಪ್ರಕಾರ ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಾಸು ಮಾಡುವ ಬಗ್ಗೆ ಹಾಗೂ ಈ ಪರೀಕ್ಷೆಯಿಂದ ವಿನಾಯಿತಿ ನೀಡಿರುವ ಹುದ್ದೆಗಳ ಬಗ್ಗೆ ನೇರ ನೇಮಕಾತಿ ಆಯ್ಕೆ ಪ್ರಕ್ರೀಯೆ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಅನ್ವಯಿಸುವ ಕುರಿತು ಉಲ್ಲೇಖ(1) ರ ಸುತ್ತೋಲೆ ಪತ್ರದಲ್ಲಿ ಕಚೇರಿ ಮುಖ್ಯಸ್ಥರಿಗೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿತ್ತು.

ನೇರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಅನ್ವಯಿಸುವಿಕೆ ಸಂಬಂಧಿಸಿದಂತೆ, ಈ ನಿಯಮಗಳ ನಿಯಮ 1 ರ ಉಪನಿಯಮ(3) ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಹುದ್ದೆಗಳನ್ನು ಹೊರತುಪಡಿಸಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿಯ ಮುಖಾಂತರ ನೇಮಕಾತಿ ಹೊಂದಿದ ನೌಕರನು/ಳು ಸರ್ಕಾರ ನಿಗಧಿಪಡಿಸಬಹುದಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅವರ ಪರಿವೀಕ್ಷಣಾವಧಿಯಲ್ಲಿ ಪಾಸು ಮಾಡತಕ್ಕದ್ದು ಮತ್ತು ಆ ಪರೀಕ್ಷೆಯನ್ನು ಪಾಸು ಮಾಡದ ಹೊರತು ಅವರ ಪರಿವೀಕ್ಷಣಾವಧಿಯನ್ನು (Probationary Period) ಘೋಷಿಸತಕ್ಕದ್ದಲ್ಲ ಎಂದು ಆದೇಶವಾಗಿರುತ್ತದೆ.

ಆದುದರಿಂದ ಇಲಾಖೆಯಲ್ಲಿರುವ ಅಧಿಕಾರಿ/ಸಿಬ್ಬಂದಿಗಳ ಪರಿವೀಕ್ಷಣಾವಧಿಯನ್ನು (Probationary Period) ಘೋಷಿಸುವ ಪ್ರಸ್ತಾವನೆ ಸಲ್ಲಿಸುವಾಗ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪಾಸಾಗಿರುವ ಪ್ರಪತ್ರ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಇಲ್ಲದಿದ್ದಲ್ಲಿ ಪರಿವೀಕ್ಷಣಾವಧಿಯನ್ನು ಘೋಷಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

(ಪಿ.ಎಸ್.ವಸ್ತ್ರದ್)
ಆಯುಕ್ತರು,
ಆರೋಗ್ಯ ಮತ್ತು ಕು.ಕ.ಸೇವೆಗಳು,

......2.

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ/ಕಳುಹಿಸಲಾಗಿದೆ:-**

1. ನಿರ್ದೇಶಕರು, ಆರೋಗ್ಯ ಮತ್ತು ಕು.ಕ.ಸೇವೆಗಳು, ರವರ ಆಪ್ತ ಸಹಾಯಕರಿಗೆ ಸಲ್ಲಿಸುತ್ತಾ, ಈ ವಿಷಯವನ್ನು ನಿರ್ದೇಶಕರ ಗಮನಕ್ಕೆ ತರಲು ಕೋರಿದೆ.
2. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಆಪ್ತ ಸಹಾಯಕರಿಗೆ ಸಲ್ಲಿಸುತ್ತಾ, ಈ ವಿಷಯವನ್ನು ಗಮನಕ್ಕೆ ತರಲು ಕೋರಿದೆ.
3. ಎಲ್ಲಾ ಜಂಟಿ-ನಿರ್ದೇಶಕರು, ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು-09.
4. ಮುಖ್ಯ ಲೆಕ್ಕಪತ್ರಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು-09.
5. ಉಪ-ನಿರ್ದೇಶಕರು (ಆರೋಗ್ಯ ಮತ್ತು ಯೋಜನೆ), ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು-09.
6. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು ಹಾಗೂ ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರುಗಳ ಮುಖಾಂತರ ಎಲ್ಲಾ ಜಿಲ್ಲಾ ಆಸ್ಪತ್ರೆಗಳು/ತಾಲ್ಲೂಕು ಆಸ್ಪತ್ರೆಗಳು/ಸ.ಆ.ಕೇಂದ್ರಗಳು/ಪ್ರಾ.ಆ.ಕೇಂದ್ರಗಳ ಆಡಳಿತಾಧಿಕಾರಿಗಳಿಗೆ.
7. ಆಡಳಿತಾಧಿಕಾರಿಗಳು (ಸಾಮಾನ್ಯ)(ಸಾರಿಗೆ) ಮತ್ತು (ಕು.ಕ), ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು-09 ರವರ ಮುಖಾಂತರ ಸಂಬಂಧಪಟ್ಟ ಎಲ್ಲಾ ಸಂಕಲನಗಳಿಗೆ.
8. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
9. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
10. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕು.ಕ.ತರಬೇತಿ ಸಂಸ್ಥೆ.
11. ಯೋಜನಾ ನಿರ್ದೇಶಕರು, ಕೆ.ಹೆಚ್.ಎಸ್.ಡಿ.ಆರ್.ಪಿ, ಬೆಂಗಳೂರು.
12. ಜಂಟಿ ನಿರ್ದೇಶಕರು, ಸಾರ್ವಜನಿಕ ಆರೋಗ್ಯ ಸಂಸ್ಥೆ, ಕೆ.ಆರ್.ವೃತ್ತ, ಬೆಂಗಳೂರು.
13. ವೈದ್ಯಕೀಯ ಅಧೀಕ್ಷಕರು, ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ/ ಕೆ.ಸಿ.ಜಿ.ಆಸ್ಪತ್ರೆ/ ಜಯನಗರ ಸಾರ್ವಜನಿಕ ಆಸ್ಪತ್ರೆ/ ಸಿ.ವಿ.ರಾಮನ್ ನಗರ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ/ ಹೆಚ್.ಎಸ್.ಘೋಷಾ ಆಸ್ಪತ್ರೆ, ಶಿವಾಜಿನಗರ, ಬೆಂಗಳೂರು.
14. ಡೀನ್ ಮತ್ತು ನಿರ್ದೇಶಕರು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
15. ಡೀನ್ ಹಾಗೂ ನಿರ್ದೇಶಕರು, ಮೈಸುರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
16. ನಿರ್ದೇಶಕರು, ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು
17. ವೈದ್ಯಕೀಯ ಅಧೀಕ್ಷಕರು, ವಿಕ್ಟೋರಿಯಾ ಆಸ್ಪತ್ರೆ/ ವಾಣಿವಿಲಾಸ ಆಸ್ಪತ್ರೆ/ ಬೌರಿಂಗ್ & ಲೇಡಿ ಕರ್ಜನ್ ಆಸ್ಪತ್ರೆ/ ಪಿ.ಕೆ.ಟಿ.ಬಿ ಆಸ್ಪತ್ರೆ/ ಕೆ.ಆರ್.ಆಸ್ಪತ್ರೆ/ ಚೆಲುವಾಂಬ ಆಸ್ಪತ್ರೆ, ಬೆಂಗಳೂರು.
18. ಡೀನ್ ಹಾಗೂ ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ/ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ/ಜಿಡಿಸಿಆರ್ಐ, ಬಳ್ಳಾರಿ (ದಂತ ಕಾಲೇಜು)/ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಮಂಡ್ಯ/ಬೀದರ್/ರಾಯಚೂರು/ಶಿವಮೊಗ್ಗ/ಬೆಳಗಾವಿ/ಹಾಸನ